ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 360
ಸದಸ್ಯರ ಹೆಸರು : ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್)
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 11-12-2020

ಕ್ರಸ	ಪ್ರಶ್ನೆ	ಉತ್ತರ
ಅ.	ಹನೂರು ತಾಲ್ಲೂಕಿನ ಕಾಡಂಚಿನ ಗ್ರಾಮಗಳಾದ ಅಲಗುಮೂಲೆ, ಕೆ.ಗುಂಡಾಪುರ, ಕಾಂಚಿಳ್ಳಿ, ಜಲ್ಲಿಪಾಳ್ಯ, ಗೋಪಿನಾಥ, ಗೂಳ್ಯ, ಚಂಗವಾಡಿ, ನಂಜೇ ಒಡೆಯರದೊಡ್ಡಿ, ನಾಗನತ್ತ, ಭೈರನತ್ತ, ತೋಮಿಯರ್ ಪಾಳ್ಯ, ದಿನ್ನಳ್ಳಿ, ಮೀಣ್ಯಂ, ಅರಬಗೆರೆ, ಕುರಟ್ಟಿ ಹೊಸೂರು, ಕೆಂಪಯ್ಯನ ಹಳ್ಳಿ, ಸತ್ತಾರ್ ಮೇಡು ಮೊದಲಾದ ಗ್ರಾಮಗಳಿಗೆ ಸೂಕ್ತ ಸಾರಿಗೆ ಬಸ್ ಸೌಲಭ್ಯ ಇಲ್ಲದೆ, ಗ್ರಾಮಸ್ಥರಿಗೆ ತೀವ್ರ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಹನೂರು ತಾಲ್ಲೂಕಿನ ಕಾಡಂಚಿನ ಗ್ರಾಮಗಳಾದ ಕೆ.ಗುಂಡಾಪುರ, ಕಾಂಚಿಳ್ಳಿ, ಜಲ್ಲಿಪಾಳ್ಯ, ಗೋಪಿನಾಥ, ಚಂಗವಾಡಿ, ನಂಜೇ ಒಡೆಯರದೊಡ್ಡಿ, ದಿನ್ನಳ್ಳಿ, ಮೀಣ್ಯಂ, ಕುರಟ್ಟಿ ಹೊಸೂರು, ಕೆಂಪಯ್ಯನ ಹಳ್ಳಿ, ಸತ್ತಾರ್ ಮೇಡು ಗ್ರಾಮಗಳಿಗೆ ಚಾಮರಾಜನಗರ ವಿಭಾಗದ ಕೊಳ್ಳೇಗಾಲ ಘಟಕದ ವತಿಯಿಂದ ಅನುಸೂಚಿ ಸಂಖ್ಯೆ 7, 9, 108/109, 4ಎಬಿ, 55, 92/93, 65, 67/68, 80, 71, 86, 123, 1 ಮತ್ತು 134ರಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ. ವಿವರಗಳನ್ನು **ಅನುಬಂಧದಲ್ಲಿ** ನೀಡಲಾಗಿದೆ. ಅಲಗುಮೂಲೆ, ಗೂಳ್ಯ, ನಾಗನತ್ತ, ಭೈರನತ್ತ, ತೋಮಿಯರ್ ಪಾಳ್ಯ ಮತ್ತು ಅರಬಗೆರೆ ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುವುದಿಲ್ಲ. ಪ್ರಸ್ತುತ ಲಾಕ್‌ಡೌನ್ ಸಡಿಲಗೊಂಡಿರುವುದರಿಂದ ಸಾರಿಗೆಗಳನ್ನು ಲಾಕ್‌ಡೌನ್ ಪೂರ್ವದಲ್ಲಿ ಇದ್ದಂತೆ ಆಚರಣೆ ಮಾಡಲು ಕ್ರಮ ಕೈಗೊಳ್ಳಲಾಗಿರುತ್ತದೆ. ಅಲಗುಮೂಲೆ, ಗೂಳ್ಯ, ನಾಗನತ್ತ, ಭೈರನತ್ತ, ತೋಮಿಯರ್ ಪಾಳ್ಯ, ನಂಜೆ ಒಡೆಯರದೊಡ್ಡಿ ಮತ್ತು ಅರಬಗೆರೆ ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸುವ ಬಗ್ಗೆ ಸೂಕ್ತ ಮಾರ್ಗ ಸಮೀಕ್ಷೆ ಕೈಗೊಂಡು, ಬಾರಿ ವಾಹನಗಳ ಆಚರಣೆಗೆ ಯೋಗ್ಯ ರಸ್ತೆ ಸೌಲಭ್ಯವಿದ್ದಲ್ಲಿ, ಪರಿಶೀಲಿಸಿ ಮುಂದಿನ ದಿನಗಳಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸಲಾಗುವುದು.
ಆ	ಕೊರೊನಾ ಲಾಕ್‌ಡೌನ್ ಪರಿಸ್ಥಿತಿಯ ನಂತರ ಈ ಗ್ರಾಮಗಳಿಗೆ ಬಸ್‌ಗಳು ಸಂಚರಿಸದೆ ಇರುವುದರಿಂದ ಗ್ರಾಮೀಣ ಜನರು ಗೂಡ್ಸ್ ಟೆಂಪೋ, ಪ್ಯಾಸೆಂಜರ್ ಆಟೋಗಳನ್ನು ಪ್ರಯಾಣಕ್ಕೆ ಆಶ್ರಯಿಸಬೇಕಾಗಿ ಬಂದಿದ್ದು, ಅಪಾಯಕಾರಿ ಪರಿಸ್ಥಿತಿಯಲ್ಲಿ ಸಂಚರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	
ಇ	ಬಂದಿದ್ದಲ್ಲಿ, ಈ ಕಾಡಂಚಿನ ಗ್ರಾಮಗಳ ಜನರ ಅನುಕೂಲಕ್ಕೆ ತಕ್ಕಂತೆ ಸಾರಿಗೆ ಬಸ್‌ಗಳು ಸಂಚರಿಸುವಂತೆ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?	

ಸಂಖ್ಯೆ: ಟಿಡಿ 253 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

LC® 360 (503)

అనుబంధ – 'అ'

ಕ್ರ.ಸಂ	ಗ್ರಾಮಗಳು	ಘಟಕ	ಅನುಸೂಚಿ ಸಂಖ್ಯೆ	ಸುತ್ತುವಳಿ ಸಂಖ್ಯೆ	ಕೊಳ್ಳೇಗಾಲ ನಿರ್ಗಮನ ಸಮಯ
1	ಕೆ.ಗುಂಡಾಪುರ.	ಕೊಳ್ಳೇಗಾಲ	7	2	0700, 1645
2	ಕಾಂಚಳ್ಳಿ.	ಕೊಳ್ಳೇಗಾಲ	7	2	0700, 1645
3	ಜಿಲ್ಲಿಪಾಳ್ಯ.	ಕೊಳ್ಳೇಗಾಲ	9, 108/109	4	0730, 0930, 1330, 1800
4	ಗೋಪಿನಾಥ.	ಕೊಳ್ಳೇಗಾಲ	4ಎಬಿ	2	0830, 1630
5	ಚಂಗವಾಡಿ.	ಕೊಳ್ಳೇಗಾಲ	55, 92/93	2	0830, 1140, 1530, 1915.
6	ದಿನ್ನಳ್ಳಿ.	ಕೊಳ್ಳೇಗಾಲ	65, 67/68	2	0745, 1530
7.	ಮೀಣ್ಯಂ.	ಕೊಳ್ಳೇಗಾಲ	65, 67/68	2	0745, 1530, 1845.
8	ಕುರಟ್ಟಿ ಹೊಸೂರು.	ಕೊಳ್ಳೇಗಾಲ	80	2	0700, 1330
9	ಕೆಂಪಯ್ಯನ ಹಳ್ಳಿ.	ಕೊಳ್ಳೇಗಾಲ	71, 86	4	0700, 0730, 1315, 1730
10	ಸತ್ತಾರ್ ಮೇಡು	ಕೊಳ್ಳೇಗಾಲ	71, 80, 86, 113	2	0640, 0730, 1030.

ಮುಖ್ಯ ಸಂಚಾರ ವ್ಯವಸ್ಥಾಪಕರು (ಕಾ)